Repairing-Bombalapura tank, Gunndlupet Taluk.

Q.—452. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) when the request for the repair work of Bombalapura tank in Gundlupet Taluk was made ;

(*b*) when the estimate for that work was prepared and the estimated amount ;

(*c*) whether the estimate has been sanctioned or not ;

(*d*) the stage at which the matter stands at present ?

A.—Sri KADIDAL MANJAPPA (Minister for Revenue and Public Works).—

(*a*) During 1949-50.

(*b*) During November 1952 for Rs. 59,600.

(*c*) Not yet.

(*d*) The technical details are under scrutiny.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅಭಾವ ಪ್ರದೇಶದಲ್ಲಿ ಪರಿಹಾರ ಕೆಲಸಗಳನ್ನು ತೆಗೆದು ಕೊಳ್ಳುವಾಗ ಈ ಕೆರೆಯ ಕೆಲಸವನ್ನು ತೆಗೆದು ಕೊಳ್ಳಬೇಕೆಂದು ಸಲಹೆ ಮಾಡಿರಲ್ಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಿದ್ದರೆ; ಇನ್ನೂ ಆಗದೇಯಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಾಜೆಕ್ಟು ನ್ಯೂಟಿನಿಯಲ್ಲದೆ. ಕಡಿಮೆ ಫೆಚ್ಚದಲ್ಲಿ ಮಾಡುವುದಕ್ಕಾಗುವುದಿಲ್ಲವೆ ಎಂಬುದನ್ನು ಪರೀಕ್ಷೆಮಾಡಬೇಕೆಂದು ಕೇಳಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಂದಾಜು ಸರ್ಕಾರಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಕ್ಷಾಮ ನಿವಾರಣೆ ಮಾಡುವ ಉದ್ದೇಶದಿಂದ ಆ ಕೆರೆ ಕೆಲಸವನ್ನು ಜಾಗ್ರತೆಮಾಡುವುದು ಒಳ್ಳೆಯದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆ.

Providing drinking water to Hangala Village, Gundlupet Taluk.

Q.—460. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) whether all the survey operations undertaken by them for providing drinking water to Hangala Village, Gundlupet Taluk, have been completed ;

(*b*) if so, the details thereof and the manner in which water will be supplied ?

(*c*) if not, the reason for not yet being able to provide drinking water ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) It is proposed to pump up water from an existing well in the tank bed to a masonry storage tank (with a head of 130 feet) to be constructed at the centre of the village. Water will be distributed by providing taps all round the masonry storage tank.

(*c*) Does not arise in view of answer to (*b*) above.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದರ ಅಂದಾಜು ಪೊಟ್ಟುಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—16,800 ರೂಪಾಯ್ಗಳು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದು ಮುಂಜೂರಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಡೆಪ್ಯುಟಿ ಕಮಿಷನರವರು 'ರೂರರ್ ಡೆವಲಪ್‌ಮೆಂಟ್ ಪೆಡ್' ನಲ್ಲಿ ಮಾಡಬೇಕು. ಅವರಿಗೆ ಕಳುಹಿಸಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ನೀರನ್ನು ಪಂಪ್ ಮಾಡುತ್ತೇವೆಂದು ಹೇಳುತ್ತೀರಿ ; ವಿದ್ಯುಚ್ಛಕ್ತಿಯಿಂದ ಮಾಡುತ್ತೀರೊ ಅಥವಾ ಆಯಿಲ್‌ನಿಂದಲ್ಲೋ ?

Sri KADIDAL MANJAPPA.—I have no details here.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಯಾರನ್ನು ಕೇಳಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಇಲಾಖೆಯವರನ್ನು, ಡೆಪ್ಯುಟಿ ಕಮೀಷನರನ್ನು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ರೆವೆನ್ಯೂ ಇಲಾಖೆ ತಮ್ಮ ಪೋರ್ಟ್‌ಫೋಲಿಯೋಗೆ ಸೇರಿಲ್ಲವೆ ?

ಅಧ್ಯಕ್ಷರು.—ಅದು ಸರಿಯಾದ ಪ್ರಶ್ನೆಯಲ್ಲ. ಮಾಡಿಸಿಕೊಡಬೇಕೆಂದು ಕೇಳಿ.

Sluice pipe of Venkateshasagara tank, Chintamani Taluk.

Q.—566. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) when the pipe was laid in front of the sluice of Venkatesha Sagara in Chintamani Taluk ;

(*b*) whether it has come to their notice that water flows into the river and is wasted before it enters the pipe as there are rocks and boulders between the sluice and the pipe;

(*c*) whether any petitions have been received from raiyats in this behalf;

(*d*) if so, whether they have taken any action?

A.—Sri KADIDAL MANJAPPA (Minister for Revenue and Public Works).—

(*a*) Recently.

(*b*) No.

(*c*) Not aware.

(*d*) Does not arise in view of (*c*).

ಶ್ರೀ ಜೆ. ನಾರಾಯಣಪ್ಪ.—ತೂಬಿನ ಮುಂದೆ ಪೈಪ್ ಹಾಕಿರುವುದು ನರಿಯಾಗಿದೆಯೆ, ಯಾವಾಗ ಹಾಕಿದ್ದು?

ಶ್ರೀ ಕಡಿದಾಳ್ ಮಂಜಪ್ಪ.—ಈಗ ತಾರೀಖು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಅರ್ಜಿಗಳು ಬಂದಿವೆಯೋ ಇಲ್ಲವೋ ಎಂಬುದನ್ನು ತಿಳಿಸುವುದಕ್ಕಾಗುವುದಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಬೇಕಾದರೆ ವಿಚಾರಿಸುತ್ತೇನೆ.

ಶ್ರೀ ಜೆ. ನಾರಾಯಣಪ್ಪ.—ಈ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದು ಎಲ್ಲಿಂದ?

ಅಧ್ಯಕ್ಷರು.—ನರಿಯಾದ ಪ್ರಶ್ನೆ ಕೇಳಿ.

ಶ್ರೀ ಜೆ. ನಾರಾಯಣಪ್ಪ.—ಅರ್ಜಿಗಳು ಬಂದಿವೆಯೇ ಎಂಬುದಕ್ಕೆ ಉತ್ತರ ಹೇಳಲು ಸಾಧ್ಯವೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಗೊತ್ತಿಲ್ಲ ಎಂದು ಉತ್ತರಕೊಟ್ಟಿದೆ.

ಶ್ರೀ ಜೆ. ನಾರಾಯಣಪ್ಪ.—ಅರ್ಜಿ ಕೊಟ್ಟಿದ್ದರೆ, ಪರಿಶೀಲನೆಮಾಡಿ ಜಾಗ್ರತೆ ಕೆಲಸಮಾಡಿನುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯಕವಾಗಿ ಆಗಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ವೆಂಕಟೇಶ ಸಾಗರ ಕೆರೆಯನ್ನು ಪಾಪಾಘ್ನಿ ನದಿಗೆ ಅಡ್ಡಲಾಗಿಕಟ್ಟಿರುವುದಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅದರಲ್ಲಿ ಬರಕಕ್ಕೆ ಹೂಳು ಹೋಗುವುದಕ್ಕಾಗಿ ಒಂದು ತೂಬನ್ನಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅದು ಕೆಟ್ಟು ಹೋಗಿದೆಯೆಂದು ಒಂದು ಮರದ ತುಂಡನ್ನು ಹಾಕಿ ಮುಚ್ಚಿದ್ದರಿಂದ ಈಗ ಆ ಕೆರೆಯಲ್ಲಿ ಸುಮಾರು ಹದಿನೈದಡಿಯಷ್ಟು ಹೂಳು ತುಂಬಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ನಮಗೆ ಬಂದಿರುವ ವರದಿಯಲ್ಲಿ ತೂಬು ಸರಿಯಾಗಿದೆ ಎಂದು ಹೇಳಿದೆ. ಈಗ ತಾವು ಹೇಳಿದಮೇಲೆ ವಿಚಾರಿಸುತ್ತೇವೆ.

Sumptuary allowance of the Chief Minister.

Q.—79. Sri B. C. NANJUNDAIYA (Kora).—

Will the Government be pleased to state:—

(*a*) the manner in which the sumptuary allowance of the Chief Minister has been spent;

(*b*) the number of entertainments arranged during the year up-to-date;

(*c*) the number of guests invited;

(*d*) the number of M.L.A.'s among the guests?

A.—Sri A. G. RAMACHANDRA RAO (Minister for Law and Education) [on behalf of Sri K. HANUMANTHAIYA (Chief Minister)].—

(*a*) The sumptuary allowance is spent at the discretion of the Chief Minister for the entertainment of guests.

(*b*) From 1st August 1952 up to end of February 1953, there has been 33 breakfasts, 24 lunches, 56 teas and 37 dinners.

(*c*) 962.

(*d*) 403 (M.L.A.'s and M.L.C.'s).

ಶ್ರೀ ಬಿ. ಸಿ. ನಂಜುಂಡಯ್ಯ.—ಈವರೆಗೆ ಈ ಹಣದಲ್ಲಿ ಎಷ್ಟು ಖರ್ಚಾಗಿದೆ?

Sri A. G. RAMACHANDRA RAO.—Notice.

ಶ್ರೀ ಬಿ. ಸಿ. ನಂಜುಂಡಯ್ಯ.—ರೆಸಿಡೆನ್ಸಿ ಮತ್ತು ಕ್ಯಾಂಪಿನಲ್ಲಿ ಆಗಿರತಕ್ಕ ಸತ್ಕಾರಕೂಟಗಳೆಲ್ಲವೂ ಇದರಲ್ಲಿ ಸೇರಿವೆಯೇ?

Sri A. G. RAMACHANDRA RAO.—The Chief Minister can include this item in sumptuary allowance at his discretion. All that amount is at his disposal.

ಶ್ರೀ ಬಿ. ಸಿ. ನಂಜುಂಡಯ್ಯ.—ಅತಿಥಿಗಳಿಗೆ ಕೇವಲ 'ಟೀ' ಪಾರ್ಟಿಗಳನ್ನು ಕೊಟ್ಟ ಬಗ್ಗೆ ಎಷ್ಟು ಖರ್ಚಾಗಿದೆ?

Sri A. G. RAMACHANDRA RAO.—Notice.

ಶ್ರೀ ಬಿ. ಸಿ. ನಂಜುಂಡಯ್ಯ.—ಆ 'ಟೀ' ಪಾರ್ಟಿಗೆ ಇಂಥಿಂಥವರೇ ಬರಬೇಕೆಂಬ ನಿಯಮವೇನಾದರೂ ಇದೆಯೇ?

Sri A. G. RAMACHANDRA RAO.—It is in the discretion of the Chief Minister.

ಶ್ರೀ ಯು. ಎಂ. ಮಾದಪ್ಪ.—ಇದರಲ್ಲಿ ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಯವರಿಗೆ ಎಷ್ಟು ಖರ್ಚಾಗಿದೆ?